# ಅಯ್ಯೋ ಪಾಪ ದೇವ್ರು

ಡಾ.ಶರಣಬಸವೇಶ್ವರ ಅಂಗಡಿ

'ಏನೋ ಚಿಂತೆಯಲ್ಲಿರುವಂತಿದೆ ವಿನಾಯಕಜೀ?' ಹಬ್ಬದ ಸಂಭ್ರಮದಲ್ಲಿ ಸಪ್ಪೆ ಮೋರೆ ಹಾಕಿದ್ದ ಸುಮುಖನನ್ನು ಕೇಳಿದೆ. ಕೇಳಬಾರದಿತ್ತು. ತನ್ನ ಕಷ್ಟ ಕಾರ್ಪಣ್ಯಗಳ ಕಡತವನ್ನೇ ಬಿಚ್ಚಿದ ಗಜಮುಖ.

"ಚಿಂತಿಸದೆ ಇನ್ನೇನು ಮಾಡಲಿ? ಮಣ ಭಾರದ ಸೊಂಡಿಲ ಮೂತಿ ಹೊರಿಸಿದ್ದೀರಿ. ಇದನ್ನು ಹೊತ್ತು ತಿರುಗಿ ಸುಸ್ತಾಗಿದೆ. ಮೇಲಿಂದ ಈ ಡೊಳ್ಳು ಹೊಟ್ಟೆ . ನಿಮಗೆಲ್ಲ ಸಿಕ್ಸ್ ಪ್ಯಾಕ್ಸ್ ಗುರಿಯಾದರೆ, ನನಗೇಕೆ ಈ ಸಿಕ್ ಪ್ಯಾಕ್ ಹೊರೆ. ಝೀರೋ ಟ್ರಾನ್ಸ್‌ಫ್ಯಾಟ್ ಫುಡ್ ಪ್ರಿಯರಾದ ನಿಮಗೆ ನನ್ನ ಆರೋಗ್ಯದ ಕಾಳಜಿಯೇ ಇಲ್ಲ. ನಿಮ್ಮ ಭಕ್ಷ್ಯ ಭೋಜ್ಯಗಳಿಂದ ಈ ಬೊಜ್ಜು ಮೈ ಬರಿಸಿ ಪಾಪದ ಇಲಿಯ ಮೇಲೆ ಹೊರಿಸಿದ್ದೀರಿ. ಅದು ನನ್ನ ತೂಕ ತಡೆಯಲಾಗದೇ ಪ್ರಾಣಿದಯಾ ಸಂಘಕ್ಕೆ ದೂರಿತ್ತಿದೆ. ಕಾನೂನು ರೀತ್ಯಾ ಕ್ರಮಕ್ಕೊಳಗಾಗುವ ಚಿಂತೆ. ಅದು ನನ್ನನ್ನು ಕೆಳಕ್ಕೆ ಬೀಳಿಸಿದಾಗಲೂ ಬಿರಿದ ಹೊಟ್ಟೆಗೆ ಹಾವು ಸುತ್ತಿಕೊಂಡು ಅದನ್ನು ಮನ್ನಿಸಿದ್ದೇ ತಪ್ಪಾಯ್ತೇನೋ? ಹೆಚ್ಚುತ್ತಲೇ ಹೊರಟಿರುವ ಹೊಟ್ಟೆಯ ಸುತ್ತಳತೆಯಿಂದ ಸುಸ್ತಾದ ಸರ್ಪದ್ದೂ ಸಮಸ್ಯೆಯಾಗಿದೆ. ಮುರಿದ ದಂತದ ಕುಳಿ(ಓ ಕ್ಯಾವಿಟಿ)ಯ ದೊಂದು ಕಾಟ, ಏಕದಂತನ ಚಿಂತೆಯ ಕಾರಣಗಳ ಪಟ್ಟಿ ಮುಂದುವರಿದಿತ್ತು. ಅದಕ್ಕೆ ತಡೆಯಾಗಿ ತೇಲಿ ಬಂತು ಶಿವವಾಣಿ.

'ನಿನ್ನ ಪರಿಸ್ಥಿತಿ ನನಗೆ ಅರ್ಥವಾಗುತ್ತದೆ ಪುತ್ರಶ್ರೀ, ನೋಡು ನನ್ನ ಪಾಡು. ಸೊಂಟಕ್ಕೆ ಆನೆಯ ಚರ್ಮ ಸುತ್ತಿ ಅರಣ್ಯ ಇಲಾಖೆಯವರ ಕೆಂಗಣ್ಣಿಗೆ ಗುರಿ ಮಾಡಿದ್ದು ಸಾಲದೇ, ಭುಜಕ್ಕೆ ನಾಗರ ಹಾವನ್ನು ಹತ್ತಿಸಿ, ಹಣೆಯ ಮಧ್ಯ ಕಣ್ಣು ತೂರಿಸಿ, ಚಂದ್ರನನ್ನು ತಲೆಗೇರಿಸಿ , ಶಿಖೆಯ ನಡುವೆ ಗಂಗೆಯನ್ನು ಕೂರಿಸಿದ್ದಾರೆ.'

'ಅಯ್ಯೋ ಶಿವನೇ' ಅನ್ನಿಸಿತು

'ನನ್ನ ಹೊರೆಯ ಮುಂದೆ ನಿನ್ನದೇನು ಮಹಾ ಮಿಸ್ಟರ್ ಶಿವ್'

ಓಹೋ ಬ್ರಹ್ಮದೇವ.

'ನನ್ನ ಪಾಡು ಯಾರಿಗೂ ಬರಬಾರದು. ಒಂದು ತಲೆಯಿಂದಲೇ ಏನೆಲ್ಲ ಪ್ರಾಬ್ಲಮ್ಸ್, ಅನಾಹುತ!. ನನಗೆ ನಾಲ್ಕು ತಲೆ ಹೊರಿಸಿ ನಗೆಪಾಟಲಿಗೀಡು ಮಾಡಿದ್ದಾರಲ್ಲಾ. ಇವರನ್ನು ಸೃಷ್ಟಿಸಿ ನನ್ನ ಕತ್ತಿಗೇ ಕುತ್ತು ತಂದುಕೊಂಡೆ. ನೆಗಡಿಯದಾಗ ನಾಲ್ಕೂ ಮೂಗುಗಳಿಗೆ ವ್ಯಾಪೋರಬ್ ಅನ್ನು ರಬ್ ಮಾಡಲು ಪಾಪ ನನ್ನ ಸರಸು(ಓಹೋ ಸರಸ್ವತಿ) ಪಡುವ ಕಷ್ಟ ಇವರಿಗೆ ಹೇಗೆ ಗೊತ್ತಾದೀತು?'

'ತಲೆನೋವು ಕಣೇ' ಅಂದ್ರೆ 'ಯಾವ ತಲೇಲಿರೀ' ಅಂತ ತುಂಟತನದ ಪ್ರಶ್ನೆ ಕೇಳಿ ಕೆಣಕುತ್ತಾಳೆ ಸರಸಿ. ಅದೊಂದು ಅವಮಾನ.

ಪಾಪ ಅನ್ನಿಸ್ತು.

ನಿಧಾನಕ್ಕೆ ಕೃಷ್ಣನ ಕ್ಯಾಲೆಂಡರಿನೆಡೆಗೆ ಕಣ್ಣು ಹಾಯಿಸಿದೆ. 'ಏನಯ್ಯಾ ನೋಡ್ತಿದ್ದೀ ಬೆಣ್ಣೆ ಕಳ್ಳ ಅಂತ ಪ್ರಚಾರ ಮಾಡಿದ್ರಿ. ಹೋಗ್ಲಿ ಬಿಡು ಅಂತ ಸುಮ್ಮನಾದೆ. ಪಿಳ್ಳಂಗೋವಿ ಹಿಡಿಸಿ ದನ ಕಾಯುವ ಕೆಲಸ ಮಾಡಿಸಿದ್ರಿ. ಅಲ್ಲಿ ಗೋವರ್ಧನ ಗಿರಿ ಎತ್ತಿ ಹಿಡಕೊಂಡು ನನ್ನ ಕಿರುಬೆರಳು ಮುರಿದಿದ್ದು ಗೊತ್ತಾ ನಿಮಗೆ.

'ಊಹೂಂ ಇಲ್ಲ' ತಲೆ ಅಲ್ಲಾಡಿಸಿದೆ.

'ಒಬ್ಬಳ್ನ ಕಟ್ಕೊಂಡೇ ವಿಲ ವಿಲ ಒದ್ದಾಡ್ತೀರಿ.' ಮುಂದುವರಿಯಿತು ಕೃಷ್ಣವಾಣಿ 'ನನಗೆ ಹದಿನಾರು ಸಾವಿರ ಹೆಂಡ್ತೀರನ್ನ ಗಂಟು ಹಾಕೋಕೆ ಹೇಗ್ರಯ್ಯಾ ಮನಸ್ಸು ಬಂತು ನಿಮಗೆ?. ಪರಮಾತ್ಮ, ಪರಮಾಪ್ತ ಅಂತ ಏನೇನೋ ಹೊಗಳಿದ್ರಲ್ಲ ಅಂತ ಸಂಭವಾಮಿ ಯುಗೇ ಯುಗೇ ಅಂದೆ. ತಪ್ಪು ಮಾಡಿದೆ. ಈ ಯುಗದಲ್ಲಿ ಬರೋಕೆ ಭಯವಾಗುತ್ತೆ. ಎಲ್ಲಿ ಬೆಣ್ಣೆ ಕದ್ದ ತಪ್ಪಿಗೋ ಇಲ್ಲಾ ಬಹುಪತ್ನಿತ್ವದ ಅಪರಾಧಕ್ಕೋ ನನ್ನ ಜನ್ಮ ಸ್ಥಾನಕ್ಕೇ ಅಟ್ಟಿ ಬಿಡ್ತೀರೊ ಅಂತ ಹೆದರಿಕೆ.'

ಕೃಷ್ಣನ ಅಂಜಿಕೆ ಸಹಜವಾದದ್ದೇ ಅನ್ನಿಸಿತು.

'ಕರೆಕ್ಟ್‌ಗಾ ಚಪ್ಪಿನಾವು ಕೃಷ್ಣ.' ಎದುರು ಗೋಡೆಯ ಪಟದಲ್ಲಿ ರಾರಾಜಿಸುತ್ತಿದ್ದ ಏಡುಕೊಂಡಲವಾಡು ಉವಾಚ. 'ಶ್ರೀ ವೆಂಕಟರಮಣ ನಿನಗೇತಕೆ ಬಾರದು ಕರುಣ ಎಂಬ ಇವರ ಆರ್ತನಾದಕ್ಕೆ ಮನಕರಗಿತು. ಧರೆಗಿಳಿದೆ. ಕೆಟ್ಟೆ. ಕಣ್ಣು ಕಾಣದಂತೆ ನಾಮ ಬಳಿದು, ಬೆಟ್ಟ ಹತ್ತಿಸಿ ಬಿಟ್ಟರು. ಮಣಗಟ್ಟಲೆ ಬಂಗಾರ, ವಜ್ರ ವೈಢೂರ್ಯ ಮೈ ಮೇಲೆ ಹೇರಿದರು. ಇದನ್ನು ಸದಾಕಾಲ ಹೊತ್ತು ನಿಲ್ಲುವ ಶಿಕ್ಷೆ ನನಗೆ. ನನ್ನ ಹುಂಡಿಗೆ ಬಂದು ಬೀಳುವ ಅನ್ ಅಕೌಂಟೆಡ್ ಫಾರೆನ್ ಕರೆನ್ಸಿ ಚಿಂತೆ ಬೇರೆ. ನನ್ನ ಹೆಸರಲ್ಲಿ ಯವ್ಯಾವ್ದೋ ಫೈನಾನ್ಸ್ ಕಂಪನಿಗಳು ಹಲವಾರು ಧಂದೆಗಳೂ ಇವೆಯಂತೆ. ಎಲ್ಲಿ ಅವನ್ನೆಲ್ಲ ಕೆದಕಿ ನನ್ನ ಹಿಂದೆ ಸಿಬಿಐ ಛೂ ಬಿಡ್ತಾರೋ ಅನ್ನುವ ಕಳವಳ' ಮನದ ದುಗುಡವನ್ನು ಸರಸರನೇ ಹೊರಗೆಡಹಿದ ಸಂಕಟರಮಣ.

'ಈ ಏಳು ಹೆಡೆಯ ಸರ್ಪದ ಮೇಲೆ ಮಲಗಿಸಿ ಸಮುದ್ರಕ್ಕೆಸೆಯುವಂಥ ತಪ್ಪು ನಾನೇನ್ರಯ್ಯ ಮಾಡಿದ್ದೆ?. ತುಸು ಆಚೀಚೆ ಹೊರಳಾಡಿದರೂ ಈ ಆದಿ ಶೇಷನ ಬುಸ್ ಬುಸ್ ಬಿಸಿಯುಸಿರು. ಇದು ಸಾಲದು ಅಂತ ಹೊಕ್ಕುಳ ಮಧ್ಯೆ ಕಮಲದ ಹೂ ಸಿಕ್ಕಿಸಿ ಅದರ ಮೇಲೆ ಆ ಬ್ರಹ್ಮನ್ನ ಹೇರಿದ್ದೀರಿ. ಯಾವ ಪಾಪಕ್ಕಾಗಿ ಈ ಶಿಕ್ಷೆ?' ವಿಲಪಿಸಿದ ವಿಷ್ಣುದೇವ.

'ಬರೀ ನಿಮ್ದೆ ಪುರಾಣವಾಯಿತಲ್ಲ. ನನ್ನದೂ ಒಂದಷ್ಟು ಕೇಳಿ'. ಮಧುರ ವಾಣಿ ಬಂದಕಡೆಗೆ ದೃಷ್ಟಿ ಹಾಯಿಸಿದೆ. ಧನವರ್ಷಿಣಿ. 'ಸದಾ ಚಿನ್ನದ ನಾಣ್ಯಗಳ ಮಳೆ ಸುರಿಸುವುದೇ ನನ್ನ ಕೆಲಸ. ಎರಡು ಸಾಲದೆಂದು ನಾಲ್ಕು ಕೈ. ಸದಾ ನಿಂತೇ ಇರಬೇಕು ಕಾಸು ಉದುರಿಸುತ್ತಲೇ ಇರಬೇಕು.' ಧನ ಲಕ್ಷ್ಮಿಯ ದೂರು.

'ಮಾತು ಮಾನವೀಕ, ಮೌನ ದೈವೀಕ ಅಂತಾರಲ್ಲ. ಇದೇನಾಶ್ಚರ್ಯ ದೇವರುಗಳೆಲ್ಲ ಮಾತಿಗಿಳಿದು ತಂತಮ್ಮ ಕಷ್ಟ ತೋಡಿಕೊಳ್ಳುತ್ತಲಿದ್ದಾರೆ!. ನಮ್ಮ ಪರಿಕಲ್ಪನೆಗಳ ಭರದಲ್ಲಿ ಅವರ ಬೇಕು ಬೇಡಗಳನ್ನು ಕಡೆಗಣಿಸಿದ್ದು ತಪ್ಪು' ಎನ್ನುವ ಆಲೋಚನೆಯಲ್ಲಿ ಮುಳುಗಿದ್ದೆ. ಥಟ್ಟನೇ ತೇಲಿಬಂತು ಮತ್ತೊಂದು ಧ್ವನಿ

'ಇದು ನಿಜವಾಗಿಯೂ ಅನ್ಯಾಯ. ಬೈಪಾಸ್ ಸರ್ಜರಿ ಪೇಶಂಟ್ಗೆ ಮಾಡಿದಂತೆ ನನ್ನ ಎದೆಗೂಡು ಸೀಳಿ ಒಳಗೆ ಸೀತಾರಾಮರನ್ನು ಕೂರಿಸಿದ್ದು ಸರಿಯಲ್ಲ. ಅಲವತ್ತುಕೊಂಡ ಆಂಜನೇಯಸ್ವಾಮಿ. ಕ್ಯಾಲೆಂಡರಿನಲ್ಲಿನ ಫೋಟೋಜೆನಿಕ್ ಫೇಸ್ ಪೇಲವವಾಗಿತ್ತು.

'ಅರೆರೆ ಪ್ರಾಣದೇವರಲ್ಲಿ ಪ್ರಾಣ ಸಂಚಾರವಾದಂತಿದೆಯಲ್ಲ' ಅಂದೆ.

'ಆಗದೇ ಮತ್ತಿನ್ನೇನು? ದೇವರು ಅಂತ ಏನೇನೋ ಕತೆ ಕಟ್ಟಿ ಹ್ಯಾಗ್ಯಾಗೋ ಚಿತ್ರ ಬರೆದ್ರೆ ಸುಮ್ಮನೆ ಇರಬೇಕಾ? ಹಾಗೆ ಸುಮ್ಮನಿದ್ದದ್ದಕ್ಕೇ ನನ್ನನ್ನು ಹಳ್ಳಿಯ ಅಗಸೆ ಬಾಗಿಲಿನಾಚೆ ನಿಲ್ಲಿಸಿ ಊರಹೊರಗಿನ ಹನುಮಪ್ಪ ನನ್ನಾಗಿಸಿದಿರಿ.ಮೂತಿಯನ್ನು ಸೊಟ್ಟಗೆ ತಿರುವಿ, ಅದಕ್ಕೆ ಕೆಂಪು ಬಣ್ಣ ಬಳಿದು ಮೇಲೆ ಎಣ್ಣೆ ಸವರಿದಿರಿ.'

'ಏನ್ರಯ್ಯಾ ಬಾಲಕನಾಗಿದ್ದಾಗ ಉದಿಸುವ ಸೂರ್ಯನನ್ನು ಕೆಂಪಾದ ಹಣ್ಣೆಂದು ಭ್ರಮಿಸಿ ತಿನ್ನಲು ಹೋಗುವಷ್ಟು ಬೆಪ್ಪನಾ ನಾನು ? ರವಿಯಿಂದ ತಿವಿಸಿಕೊಂಡು ನನ್ನ ಮುಖ ಸೊಟ್ಟಗಾಯ್ತಾ?' ಕೋಪದಿಂದ ಹನುಮಂತನ ಮುಖ ಮತ್ತಷ್ಟು ಕೆಂಪಗಾಗಿತ್ತು. ವಾಯುಪುತ್ರ ತನ್ನ ವಾಗ್ಝರಿಯನ್ನು ಮುಂದುವರಿಸಿದ. ' ಒಂದು ಸಾಲದೆಂದು ಐದು ಮುಖ ಹೊಂದಿಸಿ ಪಂಚಮುಖಿಯನ್ನಾಗಿಸಿದಿರಿ. ಆ ಐದು ತಲೆಗಳನ್ನು ಹೊತ್ತು ತಿರುಗುವ ನನ್ನ ಪಾಡೇನು? ಇನ್ನು ನಾನು ಸುಮ್ಮನಿರಲಾರೆ. ಹೀಗೆಲ್ಲ ನಿಮ್ಮ ಇಮ್ಯಾಜಿನೇಶನ್ ಹರಿಯಬಿಟ್ಟು ನನ್ನ ಇಮೇಜ್ಗೇ ಧಕ್ಕೆ ತಂದರೆ ದೇವ ದಯಾ ಸಂಘಕ್ಕೆ ದೂರಿತ್ತು ನಿಮ್ಮ ಮೇಲೆ ಮಾನ ನಷ್ಟ ಮೊಕದ್ದಮೆ ಹೂಡಬೇಕಾದೀತು ಹುಷಾರ್' ಬಜರಂಗಬಲಿಯ ಬೆದರಿಕೆಗೆ ಬೆವರಿದೆ.

'ಸಾರಿ ಮಾರುತೀಜೀ' ಅಂದೆ.

'ಸುಮ್ನಿರಯ್ಯಾ ಸಾಕು ಮಾರುತೀಜೀ ಅಂತೆ ಮಾರುತೀಜೀ. ನನ್ನಂಥ ಆಜಾನುಬಾಹುವಿನ, ವಜ್ರಕಾಯನ ಹೆಸರನ್ನು ಯಕಶ್ಚಿತ್ ಒಂದು ಮ್ಯಾಚ್ ಬಾಕ್ಸ್ ಸೈಜಿನ, ಹಿಸುಕಿದರೆ ಪುಡಿಯಾಗುವ ಕಾರಿಗೆ ಇಟ್ಟು ನನಗೆ ಅವಮಾನ ಮಾಡಿದ್ದೀರಿ. ನನ್ನ ಹೆಸರಿನ ಜೊತೆ ಸೂಸೂಕಿ ಎಂಬ ಅಪಾರ್ಥಕ್ಕೆಡೆ ಮಾಡುವ

ಹೆಸರನ್ನು ಸೇರಿಸಿ ಗೇಲಿ ಮಾಡಿದ್ದೀರಿ. ಮೊನ್ನೆ ರಾಮ್‌ಶ್ರೀ ಅದೇ ಶ್ರೀರಾಮ ದೇವರು ಏನು ಮಾರುತೀ ಸೂಸೂಕೀ? ಅಂತ ಕೇಳಿ ಹಂಗಿಸ್ತಿದ್ರು.'

'ನನಗೆ ಅಗಿರುವ ಅವಮಾನಕ್ಕೆ ಅಪಾರ ಮೊತ್ತದ ದಂಡ ತೆರುವಂತೆ ನಿಮ್ಮೆಲ್ರ ಮೇಲೂ ಕೇಸ್ ಹಾಕ್ತೀನಿ. ಅಲ್ಲದೇ ನಾನು ಪೇಟೆಂಟ್ ಪಡೆದಿರುವ ನನ್ನ ಹಾರುವ ತಂತ್ರವನ್ನ ನನ್ನ ಅನುಮತಿಯಿಲ್ಲದೇ ಬಳಸಿಕೊಂಡು ಹಾರಾಡ್ತಿದ್ದಾನಂತಲ್ಲ ಅವ್ಯಾವನೋ ಸೂಪರ್ ಮ್ಯಾನ್. ಅವನಿಂದ ಪೇಟೆಂಟ್ ಮೊತ್ತ ಕಕ್ಕಿಸದೇ ಬಿಡೋದಿಲ್ಲ.'

ಕಪೀಶನ ಮಾತುಗಳಿಂದ ಕಳವಳವಾಯ್ತು. ಇತರ ಗಾಡ್‌ಗಳ ಗೊಡವೆಗೆ ಹೋಗುವ ಧೈರ್ಯವಾಗಲಿಲ್ಲ. 'ಥ್ಯಾಂಕ್ಯು ಮಾರುತೀಶ್ರೀ' ಅಂತ ಮಾತು ಮುಗಿಸಿದೆ. 'ನಿದ್ದೇಲಿ ಅದ್ಯಾರಿಗ್ರೀ ಥ್ಯಾಂಕ್ಸು?' ಪಕ್ಕೆಗೆ ತಿವಿದೆಬ್ಬಿಸಿ ಪ್ರಶ್ನಿಸಿದಳು ಭಾಮಾಶ್ರೀ.